ಜಿಲ್ಲೆಯಲ್ಲಿಯೂ ಅಪ್ರಾಮಾಣಿಕವಾದ ಪ್ರಸಂಗಗಳು ನಡೆದಿವೆ. ಅಂದರೆ ಯಾರೋ ಅಧಿಕಾರಿಗಳು ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಿಲ್ಲ.

11.35 ಎ.ಎಂ

ಕೆಲವು ಸಾರಿ ನಿಮ್ಮ ವ್ಯವಸ್ಥೆಯೇ ಸರಿಯಿಲ್ಲದೆ ಇರಬಹುದು. ಅಂದರೆ ಇಡೀ ಸಮಗ್ರ ವ್ಯವಸ್ಥೆಯನ್ನು ನಾನು ವಿರೋಧ ಮಾಡುತ್ತಿಲ್ಲ. ಸಮಗ್ರವಾಗಿ ಇದನ್ನು ಸರಿಪಡಿಸಲು ಏನು ಕ್ರಮ ಕೈಗೊಂಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮ ಸೂಚನೆಯ ಪ್ರಕಾರ ಆ ಕ್ರಮವನ್ನು ಕೈಗೊಳ್ಳುತ್ತೇವೆ.

ಮುಳಬಾಗಿಲು ಪಟ್ಟಣದಲ್ಲಿರುವ ಎಂ.ಇ.ಎಸ್ ಮಹಾವಿದ್ಯಾಲಯ

1178 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೋಲಾರ ಜಿಲ್ಲೆಯಲ್ಲಿರುವ ಮುಳಬಾಗಿಲಿನ ಎಂ.ಇ.ಎಸ್. ಕಾಲೇಜನ್ನು ಸರ್ಕಾರ 1986ನೇ ಸಾಲಿನಲ್ಲಿ ವಹಿಸಿಕೊಂಡಾಗ ಅಂದಿನ ಆಡಳಿತ ಮಂಡಳಿಯವರು ನೇಮಕ ಮಾಡಿಕೊಂಡಿದ್ದ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು?*

ಆ) *ಈ ಹುದ್ದೆಗಳನ್ನು ನೇಮಕ ಮಾಡುವಾಗ ಸರ್ಕಾರದ ನಿಯಮದಂತೆ ಮೀಸಲಾತಿ ನೀಡಲಾಗಿದೆಯೇ?*

ಇ) *ಮೀಸಲಾತಿ ನೀತಿಯಂತೆ ನೇಮಕ ಮಾಡದೆ ಇದ್ದಲ್ಲಿ ಆ ನೇಮಕಾತಿಗಳನ್ನು ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕರು ಅನುಮೋದನೆ ನೀಡಿದ್ದಾರೆಯೇ?*

ಈ) *ಮೀಸಲಾತಿಯ ಬಗೆಗೆ ಸರ್ಕಾರ ನೀತಿಯನ್ನು ಪಾಲಿಸದೆ ನೇಮಕ ಮಾಡಿಕೊಂಡಿರುವ ಕಾಲೇಜಿನ ಆಡಳಿತ ಮಂಡಳಿಯ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವರೇ?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) :

ಅ) ಬೋಧಕ ವರ್ಗಗಳ ಒಟ್ಟು ಸಂಖ್ಯೆ 45

(10 ಮಂದಿ ಸ್ಪಾಪ್ ಗ್ಯಾಪ್
ಉಪನ್ಯಾಸಕರು ಸೇರಿ)

ಬೋಧಕೇತರ ವರ್ಗದ ಒಟ್ಟು ಸಂಖ್ಯೆ 27

ಒಟ್ಟು 72

ಆ) ಹೌದು.

ಇ) ಇಲ್ಲ.

ಈ) ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ನಾರಾಯಣ ಸ್ವಾಮಿ: ಕೋಲಾರ ಜಿಲ್ಲೆಯ ಮುಳುಬಾಗಿಲಿನಲ್ಲಿರುವ ಎಂ.ಇ.ಎಸ್. ಕಾಲೇಜನ್ನು ಸರ್ಕಾರ 1986ರಲ್ಲಿ ವಹಿಸಿಕೊಂಡಾಗ 45 ಬೋಧಕ ವರ್ಗದವರು ಹಾಗೂ 27 ಬೋಧಕೇತರ ವರ್ಗದವರು ಇದ್ದರೆಂದು ಉತ್ತರ ಕೊಟ್ಟಿದ್ದೀರಿ. ಇಲ್ಲಿ ಮೀಸಲಾತಿ ಪದ್ಧತಿ ಪ್ರಕಾರ ನೇಮಕಾತಿ ಮಾಡಿರುವುದಿಲ್ಲವೆಂಬುದರ ಬಗ್ಗೆ

ವಿವರಣೆಯನ್ನು ನೀಡಬೇಕೆಂದು ಮಾನ್ಯ ಶಿಕ್ಷಣ ಸಚಿವರನ್ನು ಕೋರುತ್ತೇನೆ. ಮೀಸಲಾತಿ ನೀತಿಯಂತೆ ನೇಮಕಾತಿ ಮಾಡಿಲ್ಲದಿದ್ದರೆ ಸಂಬಂಧಪಟ್ಟ ಶಿಕ್ಷಣ ಇಲಾಖೆಯ ನಿರ್ದೇಶಕರ ಮೇಲೆ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಆಗಿನ ಕಾಲದಲ್ಲಿ ಇದ್ದಂತಹ ನಿಯಮಗಳ ಕೆಳಗೆ ಅವರು ನೇಮಕಾತಿಗಳನ್ನು ಮಾಡಿರುತ್ತಾರೆ. ಈಗ ಇರುವ ನಿಯಮಗಳಿಗೆ ಹೋಲಿಸಿದರೆ ಅದು ಕಡಿಮೆ ಇರಬಹುದು. ನಾನು ತಿಳಿದುಕೊಂಡ ಪ್ರಕಾರ ಏನು ನೇಮಕಾತಿ ಮಾಡಿದ್ದಾರೆ ಅದನ್ನು ಆಗಿನ ಕಾಲದಲ್ಲಿ ಚಾಲ್ತಿಯಲ್ಲಿ ಇದ್ದಂತಹ ನಿಯಮಗಳ ಪ್ರಕಾರ ಮಾಡಿದ್ದಾರೆ. ಆಗಿನ ನಿಯಮದ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಸಿಗದಿದ್ದರೆ ಇತರ ವರ್ಗಗಳಿಂದ ತುಂಬಿಕೊಳ್ಳಬಹುದಾಗಿತ್ತು. ಆದ್ದರಿಂದ ಈಗಿನ ನಿಯಮಗಳನ್ನು ಅನುಸರಿಸಿ ಈಗ ಮಾಡಲು ಬರುವುದಿಲ್ಲ.

ಶ್ರೀ ಎಂ. ನಾರಾಯಣ ಸ್ವಾಮಿ : ಶಿಕ್ಷಣ ಇಲಾಖೆಯ ನಿರ್ದೇಶಕರು ಕಾನೂನು ಉಲ್ಲಂಘನೆ ಮಾಡಿದ್ದಾರೆ. ಆದ್ದರಿಂದ ಅವರ ಮೇಲೆ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಆಗ ಏನು ನಿಯಮಗಳು ಇತ್ತು ಅದಕ್ಕೆ ಅನುಸಾರವಾಗಿ ಅವರು ನೇಮಕಾತಿಗಳನ್ನು ಮಾಡಿದ್ದಾರೆ. ಆದ್ದರಿಂದ ಉಲ್ಲಂಘನೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ : ಈ ಸಂಸ್ಥೆಯನ್ನು 1986ರಲ್ಲಿ ವಹಿಸಿಕೊಂಡರೂ ಕೂಡ ಅವರು ಲೈಬ್ರರಿ ಮತ್ತು ಇತರೆ ಮೂವಬಲ್ಸ್ ಮಾತ್ರ ಕೊಟ್ಟಿದ್ದಾರೆ. ಅವರು ಪ್ರಾಪರ್ಟಿಯನ್ನು ಕೊಟ್ಟಿಲ್ಲ. ಕಟ್ಟಡವನ್ನು ಇನ್ನೂ ಸರ್ಕಾರದ ಸ್ವಾಧೀನಕ್ಕೆ ಕೊಟ್ಟಿಲ್ಲ. ನಾನು ಈ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇನ್ನು 10 ದಿವಸದಲ್ಲಿ ಸೆಟಲ್‌ಮೆಂಟ್ ಮಾಡುತ್ತೇವೆಂದು ಹೇಳಿದರು. ಆದರೆ ಇಲ್ಲಿಯವರೆಗೆ ಏನೂ ಆಗಿಲ್ಲ. ಅದರ ರಿಪೇರಿಗೆ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಈಗ ಈ ಪ್ರಾಪರ್ಟಿಯನ್ನು ಹ್ಯಾಂಡ್ ಓವರ್ ಮಾಡದೆ ಇರುವುದರಿಂದ ನಾವು ಏನೂ ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ. ಆದ್ದರಿಂದ ಇದನ್ನು ಹ್ಯಾಂಡ್ ಓವರ್ ಮಾಡಲು ಕ್ರಮ ಕೈಗೊಳ್ಳುತ್ತಿರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಈ ವಿಚಾರ ನನ್ನ ಗಮನಕ್ಕೆ ಬಂದಿದೆ. ಇದನ್ನು ನಾವು ಪರಿಶೀಲನೆ ಮಾಡುತ್ತೇವೆ.

ನೇಸರಗಿ ಗ್ರಾಮದಲ್ಲಿ ಸರ್ಕಾರಿ ಪದವಿ ಮಹಾವಿದ್ಯಾಲಯ

328 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ನೇಸರಗಿ ಗ್ರಾಮದಲ್ಲಿ ಸರ್ಕಾರಿ ಡಿಗ್ರಿ ಕಾಲೇಜು ಕಟ್ಟುವ ಸಲುವಾಗಿ ತಮ್ಮ ಕ್ರಮ ಸಂಖ್ಯೆ : ಸಿಎಂ: 1209 : ಎಮ್‌ಎಲ್‌ಎ (2) 90 ದಿನಾಂಕ 18-9-1990ರ ಕಾಲೇಜು ಕಟ್ಟಡ ಕಟ್ಟುವ ಸಲುವಾಗಿ ಅಂದಾಜು ವೆಚ್ಚ ಪತ್ರಿಕೆ ತಯಾರಿಸಲು ಆದೇಶ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಅವರ ಆದೇಶ ಪ್ರಕಾರ ಸರ್ಕಾರಿ ಪದವಿ ಕಾಲೇಜು ಕಟ್ಟಡ ಕಟ್ಟಲು ಸರ್ಕಾರದವತು ಯಾವ ಕ್ರಮವನ್ನು ಕೈಗೊಂಡಿರುವರು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು)

ಅ) ನಿಜ.